ಈ) ಹಾಲು ರವಾನೆಗೆ ತಗಲುವ ಖರ್ಚು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ರಾಜ್ಯಗಳ ಹೆಸರು	ಖರ್ಚು ಈ ಕೆಳಕಂಡಂತಿದೆ. ಪ್ರತಿ ಲೀಟರ್ (ಸರಾಸರಿ)
1	ಕೇರಳ	(Ex-Dairy ಆಧಾರದ ಮೇಲೆ ಮಾರಾಟ ಮಾಡುವುದರಿಂದ ರವಾನೆ ಖರ್ಚು ತಗಲುವುದಿಲ್ಲ)
2	ಆಂಧ್ರ ಪ್ರದೇಶ	(Ex-Dairy ಆಧಾರದ ಮೇಲೆ ಮಾರಾಟ ಮಾಡುವುದರಿಂದ ರವಾನೆ ಖರ್ಚು ತಗಲುವುದಿಲ್ಲ)
3	ಮಹಾರಾಷ್ಟ್ರ	ರೂ.1.73
4	ಗೋವಾ	ರೂ.1.40
5	ಡೆಲ್ಲಿ	ರೂ.1.15 (ಡೆಂಪೋ ಡೈರಿಯವರೆಗೂ)

ಈ ವ್ಯವಹಾರದಿಂದ ಒಕ್ಕೂಟಗಳು ಲಾಭಗಳಿಸಿರುವುದಿಲ್ಲ.

1828(1874) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಅಭಿವೃದ್ಧಿ ನಿಗಮದಿಂದ ಕೊರೆಯಲಾಗಿರುವ ವೈಯಕ್ತಿಕ ಕೊಳವೆಬಾವಿಗಳಿಗೆ ವಿದ್ಯುಚ್ಛಕ್ತಿ ನೀಡದಿರುವುದಕ್ಕೆ ಕಾರಣವೇನು;

ಆ) ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಕಂತು ತೀರಿಸಲು ನೋಟೀಸ್ ಬಂದಿರುವುದು ನಿಜವೇ;

ಇ) ಕೃಷಿ ಪಂಪಿಗೆ ವಿದ್ಯುಚ್ಛಕ್ತಿ ನೀಡದಿದ್ದರು ಕಂತು ತೀರುವಳಿ ಮಾಡಲು ರೈತನಿಗೆ ಸಾಧ್ಯವಿದೆಯೇ;

ಈ) ಈ ಬಗ್ಗೆ ಸರ್ಕಾರದ ಕ್ರಮ ಏನು?

ಡಾ.ವೈ.ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 2001-02 ನೇ ಸಾಲಿನಿಂದ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳು ಅಸ್ತಿತ್ವಕ್ಕೆ ಬಂದ ನಂತರ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಬೇಕಾದರೆ ಪ್ರತಿ ಕೊಳವೆಬಾವಿಗೆ ರೂ.25,000/- ರಂತೆ ವಿದ್ಯುತ್ ಸರಬರಾಜು ಕಂಪನಿಗೆ ಹಣ ಪಾವತಿಸಬೇಕೆಂದು ಸೂಚನೆ ನೀಡಲಾಗಿದ್ದರಿಂದ ವಿದ್ಯುದ್ದೀಕರಣವಾಗಲು ವಿಳಂಬವಾಗಿದೆ.

ಆ) ಹೌದು.

ಇ) ಸಾಧ್ಯವಿಲ್ಲ.

ಈ) ಕೊಳವೆಬಾವಿಗಳಿಗೆ ವಿದ್ಯುದ್ದೀಕರಣಗೊಂಡ ನಂತರವೇ ನಿಗಮವು ಸಹಾಯಧನ ಹೊರತುಪಡಿಸಿ ಉಳಿಕೆ ಸಾಲವನ್ನು ನಾಲ್ಕು ವರ್ಷಗಳಲ್ಲಿ ಕಂತಿನ ಪ್ರಕಾರ ಸಾಲ ವಸೂಲಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದರೆ ಕೊಳವೆಬಾವಿಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದು ಬೆಳೆ ಬೆಳೆಯುತ್ತಿರುವ ಫಲಾನುಭವಿಗಳು ಸಾಲ ಕಟ್ಟಲು ಶಕ್ತನಾಗಿದ್ದರೆ ಅಂತಹ ಫಲಾನುಭವಿಗಳಿಂದ ಸಾಲ ವಸೂಲಾತಿ ಮಾಡಲು ನಿಗಮದ ಜಿಲ್ಲಾ ವ್ಯವಸ್ಥಾಪಕರು ಕ್ರಮ ಕೈಗೊಂಡಿದ್ದಾರೆ.

ದಿನಾಂಕ: 29–12–2004 ರಂದು ಮಾನ್ಯ ಉಪ ಮುಖ್ಯಮಂತ್ರಿಯವರು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಯವರೊಡನೆ ಚರ್ಚಿಸಿ ತೆಗೆದುಕೊಂಡ ತೀರ್ಮಾನದಂತೆ ಏಪ್ರಿಲ್ 2005ರ ಮಾಹೆಯ ಅಂತ್ಯದೊಳಗೆ ಬಾಕಿ ಇರುವ ಎಲ್ಲಾ ಕೊಳವೆಬಾವಿಗಳಿಗೆ ವಿದ್ಯುದ್ದೀಕರಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಅದರಂತೆ ಕಾರ್ಯ ಪ್ರಗತಿಯಲ್ಲಿದೆ.

1828(1880) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನ ಅಮೃತ ಮಹಲ್ ಕಾವಲಿನ ಕಾವಲು ಪ್ರದೇಶದ ಪೂರ್ಣ ವಿಸ್ತೀರ್ಣವೆಷ್ಟು?

ಆ) ಇದು ಇಲಾಖಾ ವಶದಲ್ಲಿದೆಯೇ?

ಇ) ಬಿಳುವಾಲ ಅಮೃತ ಮಹಲ್ ಕಾವಲಿನ ಕಾವಲುದಾರರು ಹೆಚ್ಚು ಭೂಮಿಯನ್ನು ಕಬಳಿಸಿರುವುದರಿಂದ ಅವರ ಮೇಲೆ ಇಲಾಖೆ ಯಾವ ಕ್ರಮ ತೆಗೆದುಕೊಂಡಿದೆ?

ಈ) ಕಾವಲುಗಾರರು ಅಕ್ರಮವಾಗಿ ಹೊಂದಲಾಗಿದ್ದ ಬಿಳುವಾಲ ಕಾವಲು ಪ್ರದೇಶವನ್ನು ಕಾವಲುದಾರರಿಂದ ಅವರ ಮೇಲೆ ಇಲಾಖೆ ಯಾವ ಕ್ರಮ ತೆಗೆದುಕೊಂಡಿದೆ?

ಉ) ಈ ವಿಚಾರದಲ್ಲಿ ಅಧಿಕಾರಿಗಳು ಷಾಮಿಲಾಗಿದ್ದಾರೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್(ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಒಟ್ಟು 4309.66 ಹೆಕ್ಟೇರುಗಳು.

ಆ) ಇರುತ್ತದೆ.

ಇ) ಅಮೃತ ಮಹಲ್ ಕಾವಲಿನ 3 ಕಾವಲುಗಾರರು ನಿಗದಿಪಡಿಸಿದ ಜಮೀನಿಗಿಂತ ಹೆಚ್ಚಿನ ಜಮೀನನ್ನು ಉಳಿಮೆ ಮಾಡುತ್ತಿದ್ದು ಹಾಗೂ ಬೇರೆಯವರಿಗೂ ಉಳಿಮೆ ಮಾಡಲು ಪ್ರೋತ್ಸಾಹ ನೀಡಿದ್ದರ ಮೇರೆಗೆ ಅವರನ್ನು ವಜಾಗೊಳಿಸಲಾಗಿದೆ. ಅವರಲ್ಲಿ ಕುಮಾರಪ್ಪ ಕಾವಲುಗಾರ, ಬಿಳುವಾಲ, ಕಡೂರು ತಾ: ಇವರನ್ನು ಜನವರಿ 2005 ಕಾವಲುಗಾರಿಕೆಯಿಂದ ವಜಾ ಮಾಡಿದ್ದಕ್ಕಾಗಿ ಇವರು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಫೆಬ್ರವರಿ 2005 ರಂದು ದಾವೆ ಹೂಡಿರುತ್ತಾರೆ. ದಾವೆಯು ವಿಚಾರಣೆ ಮಾರ್ಚಿ 14 ರಂದು ಇದ್ದು, ಏಪ್ರಿಲ್ 16ಕ್ಕೆ ಮುಂದೂಡಲಾಗಿರುತ್ತದೆ.

ಈ) ಭೂ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುತ್ತಿದ್ದು ಇದರ ವರದಿ ಆಧಾರದ ಮೇಲೆ ಕ್ರಮ ಜರುಗಿಸಲಾಗುವುದು.

ಉ) ಇಲ್ಲ.

1829(2629) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ): ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ನೇಯ್ಗೆ ವೃತ್ತಿದಾರರಿಗೆ ವಾಸಿಸುವ ಮನೆ–ಕಂ–ಕಾರ್ಯಾಗಾರಗಳನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ? ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು.